info@buntsanghablr.com
buntsanghabangalore@yahoo.in

# ಸ್ನೇಹ ಚಿಂತನೆ

ಮಾಸ ಪತ್ರಿಕೆ

ಏಪ್ರಿಲ್ 2026
ಸಂಪುಟ 22 ಸಂಚಿಕೆ 04

ಸಂಚಿಕೆ ಬೆಲೆ ರೂ. 1/–










ಬಿಸು (ಯುಗಾದಿ) ಆಚರಣೆ



ವರುಣ್ ನಾಯಕ್ ಸಿ. ಕೆ.
ಪಿಸಿಎಂಸಿ 590 (98.33%)
ಪಿಯುಸಿ ವಿಜ್ಞಾನ ವಿಭಾಗ

## ರಾಜ್ಯಕ್ಕೆ 10ನೇ ರ್‍ಯಾಂಕ್

ಬೇಸಿಗೆ ರಜೆ, ಮಕ್ಕಳೂ–ಪೋಷಕರೂ ಹೇಗೆ ಸಾರ್ಥಕವಾಗಿ ತೊಡಗಿಸಿಕೊಳ್ಳಬೇಕು?

ಬಂಟರ ಸಂಘ ಬೆಂಗಳೂರು
BUNTS' SANGHA BANGALORE
# 324, Bunts' Sangha Complex, Chord Road,
Vijayanagar, Bengaluru - 560040.
P : 080-23399323 / 23399636 | E : info@buntsanghablr.com

DURGAPARAMESHWARI CHITS

# DURGAPARAMESHWARI CHITS PVT. LTD.

(Govt of Karnataka Approved Chit Company)

Regd. Office: No. 228/B 2nd Floor, 55th Cross, 3rd Block, Rajajinagar, (Near Ramamandira), Bengaluru, - 560010

Email : info@durgaparameshwarichits.in

**MB UMESH SHETTY**
Managing Director
Mobile : 9845025921 | Website: durgaparameshwarichits.in

WEBSITE



LOCATION

Chit Fund is the oldest indigenous financial Institution in India. The term CHIT FUND is known as chit, Chittie or Kuri in different parts of the country. But its operation is same throughout the country. Chit fund is a convenient financial instrument which serves twin purposes of savings and Borrowings by a subscriber. The financial institution, ensuring safest investment, subjecting itself to the control of central and state statutes, which empowers the common man is none other than **DURGAPARAMESHWARI CHITS PVT. LTD.**

## OUR POPULAR CHITS DESIGNED ACCORDING TO YOUR NEED AND CONVENIENCE

| SL.NO. | Monthly Instalment | Period | Chit Amount |
|---|---|---|---|
| 1 | 10,000 | 30 | 3,00,000 |
| 2 | 20000 | 25 | 5,00,000 |
| 3 | 25000 | 40 | 10,00,000 |
| 4 | 50,000 | 30 | 15,00,000 |
| 5 | 50,000 | 40 | 20,00,000 |
| 6 | 70,000 | 30 | 21,00,000 |

| SL.NO. | Monthly Instalment | Period | Chit Amount |
|---|---|---|---|
| 7 | 75,000 | 40 | 30,00,000 |
| 8 | 1,00,000 | 40 | 40,00,000 |
| 9 | 1,25,000 | 40 | 50,00,000 |
| 10 | 2,00,000 | 25 | 50,00,000 |
| 11 | 2,50,000 | 40 | 1,00,00,000 |
| 12 | 5,00,000 | 40 | 2,00,00,000 |

## The Best Reliable Financial Investment Option

**Call : 080-35831843 | 9535544772 | 9845025921 | 9513005556 | 9513005557**





SCAN FOR PAYMENT





ADVT.

ಬಂಟರ ಸಂಘ ಬೆಂಗಳೂರು

# ಸ್ನೇಹ ಚಿಂತನೆ

VOL - 22
APRIL - 2026
ISSUE - 04

Monthly Magazine Published by
**BUNTS' SANGHA BANGALORE**

**ಸಾಹಿತ್ಯ ಪ್ರಕಾಶನ ಸಮಿತಿ**
ಚೇರ್‌ಪರ್ಸನ್ ಮತ್ತು ಗೌರವ ಸಂಪಾದಕರು:
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ

**ಸಹ ಸಂಪಾದಕರು:**
ಶ್ರೀ ದೀಪಕ್ ಜೆ. ಶೆಟ್ಟಿ

**ಗೌರವ ಸಲಹೆಗಾರರು:**
ಶ್ರೀ ಎಂ. ಮುರಲೀಧರ ಹೆಗ್ಡೆ
ಶ್ರೀ ಬಾಲಕೃಷ್ಣ ಶೆಟ್ಟಿ (ಎಬಿ ಶೆಟ್ಟಿ)
ಡಾ. ದೀಪಕ್ ಶೆಟ್ಟಿ

**ಸಂಪಾದಕೀಯ ಮಂಡಳಿ**
ಶ್ರೀಮತಿ ನಿರ್ಮಲ ಸಿ. ರೈ
ಶ್ರೀ ಪ್ರಸಾದ್ ಶೆಟ್ಟಿ ಸೀತಾನದಿ
ಶ್ರೀಮತಿ ಸ್ಮಿತಾ ಬಲ್ಲಾಳ್
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀ ಸಂದೀಪ್ ಹೆಗ್ಗದ್ದೆ
ಶ್ರೀಮತಿ ಶ್ಯಾಮಲ ಶೆಟ್ಟಿ

**ಪತ್ರಿಕಾ ಸಲಹಾ ವಿಭಾಗ:**
ಸಮಾಜ ಸೇವೆ ವಿಭಾಗ: ಶ್ರೀ ಜಯರಾಮ ಶೆಟ್ಟಿ ನೂಜಾಡಿ
ಕಾನೂನು ಸಲಹೆಗಾರರು: ಶ್ರೀಮತಿ ಸುಪ್ರೀತಾ ಕೆ. ಶೆಟ್ಟಿ
ಆರೋಗ್ಯ ಮಾಹಿತಿ ವಿಭಾಗ: ಡಾ. ಶಾಲ್ಮಲೀ ಸುರೇಶ್
ಮನೋರಂಜನಾ ವಿಭಾಗ: ಶ್ರೀಮತಿ ರೇವತಿ ಶೆಟ್ಟಿ
ಶೈಕ್ಷಣಿಕ ವಿಭಾಗ: ಶ್ರೀಮತಿ ನಂದಿನಿ ನಾಗರಾಜ್ ಶೆಟ್ಟಿ
ಕ್ರೀಡಾ ವಿಭಾಗ: ಶ್ರೀ ನವೀನ್ ಶೆಟ್ಟಿ

**ಪೋಷಕ ಸದಸ್ಯರು:**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ. ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು:**
ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ

## ಒಳ ಪುಟಗಳಲ್ಲಿ.....

| | ಪುಟ |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಯವರ ವರದಿ | 4 |
| ಮದುವೆ-ಸುಸಂಸ್ಕೃತಿ, ಸುಶಿಕ್ಷಿತ ಸಮಾಜ ಭಾರತದ ಮಾದರಿ | 5 |
| ಸಮಾಜ ಸೇವಾ ಸಮಿತಿ ಮತ್ತು ಸೇವಾದಳ | 7 |
| ಮನದ ಮನೆಗೆ ಮಲ್ಲಿಗೆಯಾಗು | 8 |
| ಉಡುಪಿಯ ಬಂಟರ ಸಂಘ ಸ್ಥಾಪಿಸಿ, ದೀರ್ಘ ಕಾಲದ ಅಧ್ಯಕ್ಷರಾಗಿ ಸುಂದರವಾದ ಅಮ್ಮಣ್ಣಿ ಕೆ.ಪಿ. ರಾಮಣ್ಣ ಶೆಟ್ಟಿ ಸಭಾಂಗಣ ನಿರ್ಮಿಸಿದ ಕಡಂದಲೇ ಪಾಲಡ್ಕ ಮೇಗಿನ ಮನೆ ನಾರಾಯಣ ಶೆಟ್ಟಿ | 9 |
| ಬಂಟರ ಸಂಘ ಬೆಂಗಳೂರು-ಪ್ರಾರ್ಥನಾ ಮಂದಿರ ಸಮಿತಿ ಕುಣಿತ ಭಜನಾ ತರಗತಿ ಉದ್ಘಾಟನಾ ಕಾರ್ಯಕ್ರಮ | 10 |
| ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ 2024-26 ಸಹೃದಯ ಸಮಾಜ ಬಾಂಧವರಲ್ಲಿ ವಿನಂತಿ | 11 |
| ಬಂಟ್ಸ್ ವಿದ್ಯಾ ಸಂಕಲ್ಪ ನಿಧಿ ಸಹೃದಯ ಸದಸ್ಯ ಬಾಂಧವರಲ್ಲಿ ವಿನಂತಿ | 12 |
| ವಿವಾಹ ವೇದಿಕೆ ಸಮಿತಿ ವಧು-ವರರ ಸಮಾವೇಶ | 13 |

**ಮುಖ ಪುಟ**

ಬಿಸು (ಯುಗಾದಿ) ಆಚರಣೆ

ವರುಣ್ ನಾಯಕ್ ಸಿ. ಕೆ. ಪಿಸಿಎಂಸಿ 590 (98.33%)
ಪಿಯುಸಿ ವಿಜ್ಞಾನ ವಿಭಾಗ, ರಾಜ್ಯಕ್ಕೆ 10ನೇ ರ್‍ಯಾಂಕ್

ಈ ಸಂಚಿಕೆಯಲ್ಲಿ ಪ್ರಕಟವಾದ ಜಾಹೀರಾತು ಮತ್ತು ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಚಂದಾದಾರರು ಮತ್ತು ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ - ಸಂಪಾದಕ ಮಂಡಳಿ

# ಸಂಪಾದಕೀಯ



### ಬೇಸಿಗೆ ರಜೆ, ಮಕ್ಕಳೂ–ಪೋಷಕರೂ ಹೇಗೆ ಸಾರ್ಥಕವಾಗಿ ತೊಡಗಿಸಿಕೊಳ್ಳಬೇಕು?

ಬೇಸಿಗೆ ರಜೆ ಎಂದರೆ ಮಕ್ಕಳಿಗೆ ಉಲ್ಲಾಸದ ಸಮಯ. ಶಾಲೆಯ ಒತ್ತಡದಿಂದ ಸ್ವಲ್ಪ ವಿರಾಮ ಸಿಗುವ ಈ ಅವಧಿ. ಸರಿಯಾಗಿ ಬಳಸಿದರೆ ಮಕ್ಕಳ ವ್ಯಕ್ತಿತ್ವ ಬೆಳವಣಿಗೆಗೆ ಅತ್ಯಂತ ಮಹತ್ವದ ಹಂತವಾಗಬಹುದು. ಆದರೆ ಸರಿಯಾದ ಮಾರ್ಗದರ್ಶನವಿಲ್ಲದೆ ಈ ಸಮಯ ವ್ಯರ್ಥವಾಗುವ ಸಾಧ್ಯತೆ ಕೂಡ ಇದೆ. ಇಲ್ಲಿ ಪೋಷಕರ ಪಾತ್ರ ಅತ್ಯಂತ ಮುಖ್ಯವಾಗುತ್ತದೆ.

ಮೊದಲಿಗೆ, ಮಕ್ಕಳ ದಿನಚರಿಯನ್ನು ಸಂಪೂರ್ಣವಾಗಿ ಬಿಡುವುದಕ್ಕಿಂದ ಸ್ವಲ್ಪ ನಿಯಮಬದ್ಧತೆ ಇರಬೇಕು. ಬೆಳಗಿನ ಸಮಯವನ್ನು ಓದು, ಪುಸ್ತಕ ವಾಚನ ಅಥವಾ ಹೊಸ ವಿಷಯಗಳನ್ನು ಕಲಿಯಲು ಬಳಸಬಹುದು. ಕಥೆಗಳು, ಆತ್ಮಕಥೆಗಳು, ವಿಜ್ಞಾನ ಸಂಬಂಧಿತ ಪುಸ್ತಕಗಳು ಮಕ್ಕಳ ಕಲ್ಪನೆ ಶಕ್ತಿಯನ್ನು ವಿಸ್ತರಿಸುತ್ತವೆ.

ಇದೇ ಸಮಯದಲ್ಲಿ ಕೇವಲ ಪುಸ್ತಕ ಓದುವುದಲ್ಲ, ಪ್ರಾಯೋಗಿಕ ಜ್ಞಾನವೂ ಅಗತ್ಯ. ಅಡುಗೆ ಮನೆಯ ಸಣ್ಣ ಕೆಲಸಗಳು, ತೋಟಗಾರಿಕೆ, ಮನೆಯ ಸ್ವಚ್ಛತೆ–ಇವು ಮಕ್ಕಳಲ್ಲಿ ಜವಾಬ್ದಾರಿ ಮತ್ತು ಜೀವನ ಕೌಶಲ್ಯಗಳನ್ನು ಬೆಳೆಸುತ್ತವೆ. ಪೋಷಕರು ಮಕ್ಕಳ ಜೊತೆಗೂಡಿ ಈ ಚಟುವಟಿಕೆಗಳಲ್ಲಿ ಭಾಗವಹಿಸಿದರೆ ಅದು ಕುಟುಂಬ ಬಾಂಧವ್ಯವನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ.

ಬೇಸಿಗೆ ರಜೆ ಎನ್ನುವುದು ಪ್ರತಿಭೆ ಅರಳಿಸುವ ಸಮಯವೂ ಹೌದು. ಸಂಗೀತ, ನೃತ್ಯ, ಚಿತ್ರಕಲೆ, ಕ್ರೀಡೆ, ಯೋಗ, ಭಜನೆ ಮಕ್ಕಳ ಆಸಕ್ತಿಗೆ ತಕ್ಕಂತೆ ತರಬೇತಿ ನೀಡಿದರೆ ಅವರ ಒಳಗುಣಗಳು ಬೆಳಗುತ್ತವೆ. ಇಂದಿನ ಕಾಲದಲ್ಲಿ ಆನ್‌ಲೈನ್ ತರಗತಿಗಳೂ ಲಭ್ಯವಿರುವುದರಿಂದ ಕಲಿಕೆಯ ಅವಕಾಶಗಳು ಅನೇಕ.

ಇದರ ಜೊತೆಗೆ, ಡಿಜಿಟಲ್ ಸಾಧನಗಳ ಬಳಕೆ ನಿಯಂತ್ರಣದಲ್ಲಿರಬೇಕು. ಮೊಬೈಲ್, ಟಿವಿ, ಗೇಮ್ಸ್ ಇವುಗಳ ಮೇಲೆ ಹೆಚ್ಚು ಸಮಯ ಕಳೆಯುವುದರಿಂದ ಮಕ್ಕಳ ಆರೋಗ್ಯ ಮತ್ತು ಮನೋಭಾವದ ಮೇಲೆ ದುಷ್ಪರಿಣಾಮ ಬೀಳಬಹುದು. ಆದ್ದರಿಂದ ಪೋಷಕರು ಸಮಯ ಮಿತಿ ನಿಗದಿ ಮಾಡುವುದು ಅತ್ಯವಶ್ಯಕ.

ಪ್ರಕೃತಿಯ ಜೊತೆ ಮಕ್ಕಳನ್ನು ಕೊಂಡೊಯ್ಯುವುದು ಕೂಡ ಬಹಳ ಮುಖ್ಯ. ಊರು ದೇವಸ್ಥಾನ, ನದಿ, ಬೆಟ್ಟ–ಈ ಸ್ಥಳಗಳಿಗೆ ಕರೆದೊಯ್ದು ನಮ್ಮ ಸಂಸ್ಕೃತಿ, ಪರಂಪರೆ ಮತ್ತು ಪರಿಸರದ ಬಗ್ಗೆ ಅರಿವು ಮೂಡಿಸಬಹುದು. ಹಿರಿಯರ ಜೊತೆ ಸಮಯ ಕಳೆಯುವ ಅವಕಾಶ ನೀಡುವುದರಿಂದ ಸಂಸ್ಕಾರಗಳು ಸ್ವಾಭಾವಿಕವಾಗಿ ಬೆಳೆಸಿಕೊಳ್ಳುತ್ತವೆ.

ಇನ್ನಷ್ಟು ಗಮನಿಸಬೇಕಾದ ಪ್ರಮುಖ ತತ್ವಗಳು;

ಮಕ್ಕಳಿಗೆ ಸ್ವತಂತ್ರವಾಗಿ ಯೋಚಿಸುವ ಅವಕಾಶ ನೀಡಿ; ಪ್ರತಿಯೊಂದಕ್ಕೂ ತಕ್ಷಣ ಉತ್ತರ ಕೊಡುವುದಕ್ಕಿಂದ ಅವರಲ್ಲೇ ಚಿಂತನೆ ಮೂಡಿಸಿ.

ದಿನಕ್ಕೆ ಕನಿಷ್ಠ ಒಂದು ಗಂಟೆ ದೈಹಿಕ ಚಟುವಟಿಕೆ (ಆಟ, ವ್ಯಾಯಾಮ) ಕಡ್ಡಾಯವಾಗಿರಲಿ. ಮಕ್ಕಳ ಆಸಕ್ತಿಯನ್ನು ಗೌರವಿಸಿ–ಪೋಷಕರ ಆಸೆಗಳನ್ನು ಬಲವಂತವಾಗಿ ಹೇರುವುದು ತಪ್ಪಿಸಬೇಕು.

ಸಣ್ಣ ಗುರಿಗಳನ್ನು ನಿಗದಿಪಡಿಸಿ (ಉದಾ: ಒಂದು ಪುಸ್ತಕ ಓದಿ ಮುಗಿಸುವುದು, ಒಂದು ಕೌಶಲ್ಯ ಕಲಿಯುವುದು ಅದನ್ನು ಸಾಧಿಸಲು ಪ್ರೋತ್ಸಾಹಿಸಿ. ಸಮಾಜಸೇವೆ ಅಥವಾ ಸಹಾಯ ಮನೋಭಾವ ಬೆಳೆಸುವ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೇರೇಪಿಸಿ. ಆಧ್ಯಾತ್ಮಿಕತೆ ಮತ್ತು ಮೌಲ್ಯ ಶಿಕ್ಷಣಕ್ಕೂ ಸ್ವಲ್ಪ ಸಮಯ ಮೀಸಲಿಡಿ–ಪ್ರಾರ್ಥನೆ, ಭಜನೆ, ಸತ್ಸಂಗ ಇವು ಮನಶಾಂತಿಗೆ ಸಹಾಯಕ. ಕೊನೆಯದಾಗಿ, ಬೇಸಿಗೆ ರಜೆ ಕೇವಲ ವಿಶ್ರಾಂತಿ ಮಾತ್ರವಲ್ಲ; ಅದು ಬದುಕಿನ ಪಾಠಗಳನ್ನು ಕಲಿಸುವ ಒಂದು ಅವಕಾಶ. ಪೋಷಕರು ಮಾರ್ಗದರ್ಶಕರಾಗಿ ನಿಂತರೆ, ಮಕ್ಕಳು ಈ ಅವಧಿಯನ್ನು ಸಂತೋಷದಿಂದ ಮತ್ತು ಪ್ರಯೋಜನಕಾರಿಯಾಗಿ ಬಳಸಿಕೊಳ್ಳುತ್ತಾರೆ.

ಬೇಸಿಗೆ ರಜೆಯನ್ನು ಸಾರ್ಥಕಗೊಳಿಸುವುದು ನಮ್ಮೆಲ್ಲರ ಜವಾಬ್ದಾರಿ. ಮಕ್ಕಳ ಭವಿಷ್ಯವನ್ನು ರೂಪಿಸುವ ಈ ಸುವರ್ಣಾವಕಾಶವನ್ನು ನಾವು ಕೈಚೆಲ್ಲಬಾರದು.

**ರವೀಂದ್ರ ಶೆಟ್ಟಿ ಹಟ್ಟಿಯಂಗಡಿ**
**ಸಂಪಾದಕರು**

# ಅಧ್ಯಕ್ಷರ ಮಾತು



ಪ್ರೀತಿಯ ಬಂಟ ಬಾಂಧವರೇ,

**ಯುಗಾದಿ ಸಂವತ್ಸರೋದಯೇ, ನವಚೇತನ ಸಂಜಾಯತೇ।**
**ಮನಶ್ಶುದ್ಧಿ: ಸದಾ ಭೂಯಾತ್, ಸೌಖ್ಯ ಸಂಪದ್ವಿವರ್ಧತೇ॥**

ಹೊಸ ವರ್ಷದ ಈ ಉದಯ ಕಾಲದಲ್ಲಿ ನಮ್ಮಲ್ಲಿ ಹೊಸ ಚೈತನ್ಯವು ಮೂಡಲಿ. ನಮ್ಮ ಮನಸ್ಸು ಯಾವಾಗಲೂ ಪರಿಶುದ್ಧವಾದ ಆಲೋಚನೆಗಳಿಂದ ಕೂಡಿರಲಿ ಹಾಗೂ ಜೀವನದಲ್ಲಿ ಸುಖ, ಶಾಂತಿ ಮತ್ತು ಐಶ್ವರ್ಯವು ನಿರಂತರವಾಗಿ ವೃದ್ಧಿಸಲಿ ಎಂದು ಶುಭ ಹಾರೈಸುತ್ತೇನೆ.

ದಿನಾಂಕ 14.04.2026 ರಂದು ನಮ್ಮ ಸಂಘದಲ್ಲಿ ಯುಗಾದಿ (ಬಿಸು) ಹಬ್ಬವನ್ನು ನಮ್ಮ ಸಂಸ್ಕೃತಿಯ ದ್ಯೋತಕವಾಗಿ ಬಹಳ ಅರ್ಥಪೂರ್ಣವಾಗಿ ವಿಜೃಂಭಣೆಯಿಂದ ಆಚರಿಸಲಾಯಿತು. ಸಾಂಸ್ಕೃತಿಕ ಕಾರ್ಯಕ್ರಮವನ್ನು ಬಹಳ ಅಚ್ಚುಕಟ್ಟಾಗಿ ಆಯೋಜಿಸಿದ ಸಾಂಸ್ಕೃತಿಕ ಸಮಿತಿಯ ಚೇರ್‌ಪರ್ಸನ್ ಶ್ರೀ ರಮೇಶ್ ಜಿ. ಶೆಟ್ಟಿ, ಸಂಚಾಲಕರಾದ ಶ್ರೀ ಸಂತೋಷ್ ಶೆಟ್ಟಿ ತಲೇಕಳ ಮತ್ತು ಅವರ ತಂಡಕ್ಕೆ ಅಭಿನಂದನೆಗಳು.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–I ಮತ್ತು II ಶಾಲೆಯ ದ್ವಿತೀಯ ಪಿಯುಸಿ ಫಲಿತಾಂಶ ಹಾಗೂ ಆರ್. ಎನ್.ಎಸ್. ವಿದ್ಯಾನಿಕೇತನ–I ಶಾಲೆಯ ಎಸ್.ಎಸ್.ಎಲ್.ಸಿ. ಸಿಬಿಎಸ್‌ಇ ಪರೀಕ್ಷೆಯಲ್ಲಿ ಹಿಂದಿನ ವರ್ಷಕ್ಕಿಂತ ಅತ್ಯುತ್ತಮ ಫಲಿತಾಂಶವು ಹೊರಹೊಮ್ಮಿದೆ. **ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿಯು 98.33% ಅಂಕ ಗಳಿಸಿ ರಾಜ್ಯಕ್ಕೆ 10ನೇ ರ್‍ಯಾಂಕ್** ಪಡೆದಿರುವುದು ನಮ್ಮ ವಿದ್ಯಾಸಂಸ್ಥೆಗೆ ಹೆಮ್ಮೆ ಮತ್ತು ಶಾಲೆಯ ಕೀರ್ತಿಯನ್ನು ಮತ್ತಷ್ಟು ಉನ್ನತಿಗೆ ಏರಿಸಿದೆ. ಈ ಸಾಧನೆಗೆ ಶ್ರಮಿಸಿದ ಶಿಕ್ಷಕ ವೃಂದ, ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಹೃತ್ಪೂರ್ವಕ ಅಭಿನಂದನೆಗಳು.

ಸಂಘವು 2022 ರಿಂದ 'ಸಂಕಲ್ಪ' ಯೋಜನೆಯ ಮೂಲಕ ಅನೇಕ ಅರ್ಹ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣದ ಬೆಳಕನ್ನು ಹಂಚುವ ಪುಣ್ಯಕಾರ್ಯವು ನಡೆಯುತ್ತಿದೆ. 'ಸಂಕಲ್ಪ' ಯೋಜನೆಯಡಿಯಲ್ಲಿ ಕಳೆದ ವರ್ಷ ಒಟ್ಟು 132 ವಿದ್ಯಾರ್ಥಿಗಳು ಸೇರ್ಪಡೆಗೊಂಡಿದ್ದು, ಈ ವರ್ಷ ಒಟ್ಟು 60 ವಿದ್ಯಾರ್ಥಿಗಳಿಗೆ ಉಚಿತ ಪಿಯುಸಿ ಶಿಕ್ಷಣ ಹಾಗೂ ವಸತಿ ಸೌಲಭ್ಯವನ್ನು ನೀಡುವ ಯೋಜನೆ ಹಮ್ಮಿಕೊಂಡಿದ್ದೇವೆ. ಈ ಕಾರ್ಯಕ್ಕೆ ಸಂಘವು ಪ್ರತೀ ವಿದ್ಯಾರ್ಥಿಗೆ ವರ್ಷಕ್ಕೆ ರೂ. 1,50,000/– ರಂತೆ 1 ವರ್ಷದ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾಭ್ಯಾಸಕ್ಕೆ ಸರಾಸರಿ 60 ವಿದ್ಯಾರ್ಥಿಗಳಿಗೆ ವರ್ಷಂಪ್ರತಿ ಸುಮಾರು 1.8 ಕೋಟಿ ರೂಪಾಯಿಗಳನ್ನು ಭರಿಸುತ್ತಿದೆ. ಮುಂದಿನ ದಿನಗಳಲ್ಲಿ ಈ ಯೋಜನೆಯನ್ನು ಶಾಶ್ವತವಾಗಿ ಮುಂದುವರೆಸುವ ಉದ್ದೇಶದಿಂದ **'ಬಂಟ್ಸ್ ವಿದ್ಯಾ ಸಂಕಲ್ಪ ನಿಧಿ'** ಯನ್ನು ಸ್ಥಾಪಿಸಿದ್ದು, "ವಿದ್ಯೆಯೇ ಶಾಶ್ವತ ಸಂಪತ್ತು" ಎಂದು ಸಹೃದಯಿ ಸದಸ್ಯ ಬಂಧುಗಳು–ದಾನಿಗಳಾದ ತಾವು ತಮ್ಮ ಕೈಲಾದಷ್ಟು ಸಹಾಯ ಮಾಡುವುದರ ಮೂಲಕ ಈ ಮಹಾ ವಿದ್ಯಾದಾನದ ಸೇವಾ ಕೈಂಕರ್ಯಕ್ಕೆ ಕೈಜೋಡಿಸಿ ಈ ಯೋಜನೆಯನ್ನು ನಿರಂತರಗೊಳಿಸಬೇಕೆಂಬ ಆಸೆಯನ್ನು ಹೊಂದಿರುತ್ತೇನೆ. ಇದರ ಬಗ್ಗೆ ಕೂಲಂಕುಷವಾಗಿ ಮುಂದಿನ ಪುಟದಲ್ಲಿ ವಿವರಿಸಲಾಗಿದೆ.

ಸಮಾಜದಿಂದ ಪಡೆದುದನ್ನು ಸಮಾಜಕ್ಕೆ ಹಿಂತಿರುಗಿ ಕೊಡುಗೆಯಾಗಿ ನೀಡುವುದರ ಮೂಲಕ ಸಮುದಾಯದ ಇನ್ನಷ್ಟು ವಿದ್ಯಾರ್ಥಿಗಳಿಗೆ ನೆರವಾಗಿ ನಿಲ್ಲುವ ಉದ್ದೇಶದೊಂದಿಗೆ, ಸದಸ್ಯರ ಬೆಂಬಲದಿಂದ ಬಡ್ಡಿ ರಹಿತ ಸಾಲ ರೂಪದ ವಿದ್ಯಾರ್ಥಿವೇತನದ ಮೊತ್ತ ರೂ. 17,00,000/–ಕ್ಕೂ ಅಧಿಕ ಹಣವನ್ನು ಸಂಘವು ಸಂಗ್ರಹಿಸಲು ಸಹಕರಿಸಿದ ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿಯ ಚೇರ್‌ಪರ್ಸನ್ ಶ್ರೀ ಉಮೇಶ್ ಕುಮಾರ್ ಶೆಟ್ಟಿ, ಸಂಚಾಲಕರಾದ ಶ್ರೀ ಸುಧಾಕರ್ ಶೆಟ್ಟಿ ಹಟ್ಟಿಯಂಗಡಿ ಮತ್ತು ಅವರ ತಂಡಕ್ಕೆ ಅಭಿನಂದನೆಗಳು.

ದಿನಾಂಕ 02.05.2026, ಶನಿವಾರದಂದು ವಿಶೇಷ ಮಹಾಸಭೆಯನ್ನು ಕರೆಯಲು ತೀರ್ಮಾನಿಸಿದ್ದು, ಸದಸ್ಯರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸಂಘದ ಒಳಿತಿಗಾಗಿ ಸಲಹೆ–ಸೂಚನೆ ಮತ್ತು ಸಹಕಾರ ನೀಡಬೇಕಾಗಿ ವಿನಂತಿ.

**ಇಂತಿ ತಮ್ಮ ಪ್ರೀತಿಯ**
**ಸಿಎ. ಅಶೋಕ್ ಶೆಟ್ಟಿ ಎಂ**
**ಅಧ್ಯಕ್ಷರು**

# ಗೌರವ ಕಾರ್ಯದರ್ಶಿಯವರ ವರದಿ



“ನಮ್ಮ ಪರಂಪರೆ ನಮ್ಮ ಹೆಮ್ಮೆ, ನಮ್ಮ ಏಕತೆ ನಮ್ಮ ಬಲ”. ಸದಸ್ಯರೆಲ್ಲರಿಗೂ ಸೌರಮಾನ ಯುಗಾದಿಯ ಹಾರ್ದಿಕ ಶುಭಾಶಯಗಳು.

ಮಾನ್ಯರೇ,

2025–26ನೇ ಸಾಲಿನ ಪಿಯುಸಿ ಫಲಿತಾಂಶದಲ್ಲಿ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–Iರ ವಿಜ್ಞಾನ ವಿಭಾಗದ **ವರುಣ್ ನಾಯಕ್ 98.33% ಅಂಕಗಳಿಸಿ ರಾಜ್ಯಕ್ಕೆ 10ನೇ ರ್‍ಯಾಂಕ್** ಪಡೆದು ನಮ್ಮ ವಿದ್ಯಾಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸಿರುತ್ತಾರೆ. ವಾಣಿಜ್ಯ ವಿಭಾಗದಲ್ಲಿ ರಕ್ಷಾ ಕಾಂತರಾಜುರವರು 97.5% ಅಂಕ ಪಡೆದು ಕಾಲೇಜು ಟಾಪರ್ ಆಗಿದ್ದಾರೆ. 160 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 158 ವಿದ್ಯಾರ್ಥಿಗಳು ಪ್ರಥಮ ದರ್ಜೆ, 7 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದು, ವಿಜ್ಞಾನ ವಿಭಾಗದಲ್ಲಿ 99.69%, ವಾಣಿಜ್ಯ ವಿಭಾಗದಲ್ಲಿ 100% ಫಲಿತಾಂಶದೊಂದಿಗೆ ಅತ್ಯುತ್ತಮ ಸಾಧನೆ ತೋರಿದ್ದಾರೆ.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–IIರಲ್ಲಿ 32 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 66 ವಿದ್ಯಾರ್ಥಿಗಳು ಪ್ರಥಮ ದರ್ಜೆ, 4 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದು, ವಿಜ್ಞಾನ ವಿಭಾಗದಲ್ಲಿ 96.5%, ವಾಣಿಜ್ಯ ವಿಭಾಗದಲ್ಲಿ 92% ಫಲಿತಾಂಶದೊಂದಿಗೆ ಉತ್ತಮ ಸಾಧನೆ ಮೆರೆದಿದ್ದಾರೆ. ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–I ಶಾಲೆಯ ಎಸ್.ಎಸ್. ಎಲ್.ಸಿ. ಸಿಬಿಎಸ್ಇ ಪರೀಕ್ಷೆಯಲ್ಲಿ 100% ಫಲಿತಾಂಶವು ಬಂದಿದ್ದು, ಶಮಿತಾ ಎಸ್.ಎಂ.ರವರು 98.4% ಅಂಕ ಪಡೆದು ಶಾಲೆಗೆ ಟಾಪರ್ ಆಗಿರುತ್ತಾರೆ, 24 ವಿದ್ಯಾರ್ಥಿಗಳು ಹೈ ಡಿಸ್ಟಿಂಕ್ಷನ್, 19 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಹಾಗೂ 60 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದು, ಶಾಲೆಯ ಕೀರ್ತಿ ಮತ್ತು ಗೌರವವನ್ನು ಹೆಚ್ಚಿಸಿದ್ದಾರೆ. ಸಾಧನೆಗೈದ ಎಲ್ಲಾ ವಿದ್ಯಾರ್ಥಿಗಳಿಗೆ, ಪ್ರೋತ್ಸಾಹ ನೀಡಿದ ಪೋಷಕರಿಗೆ, ಶಾಲಾಡಳಿತ ಮಂಡಳಿಗೆ, ಕಾರ್ಯಕಾರಿ ಸಮಿತಿಗೆ, ಪ್ರಾಂಶುಪಾಲರಿಗೆ, ಶಿಕ್ಷಕ–ಶಿಕ್ಷಕೇತರ ವೃಂದದವರಿಗೆ ಹಾರ್ದಿಕ ಅಭಿನಂದನೆಗಳು.

ನಮ್ಮ ಸಂಘದ ಬಿಸು (ಯುಗಾದಿ) ಆಚರಣೆಯನ್ನು ದಿನಾಂಕ 14.04.2026ರಂದು ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಚಾರ್ಟೆಡ್ ಗ್ರೂಪ್ ಚೇರ್‌ಮೆನ್ ಶ್ರೀ ಏರ್ಯ ಬಾಲಕೃಷ್ಣ ಹೆಗ್ಡೆಯವರು, ಗೌರವ ಅತಿಥಿಗಳಾಗಿ ಮಹಿಳಾ ದಕ್ಷತ ಸಮಿತಿ, ಕರ್ನಾಟಕ ಇದರ ಅಧ್ಯಕ್ಷರಾದ ಶ್ರೀಮತಿ ಶರಣ್ಯ ಎಸ್. ಹೆಗ್ಡೆಯವರು ಆಗಮಿಸಿದ್ದರು. ಇದೇ ಸಂದರ್ಭದಲ್ಲಿ ಮಿಸ್ ಯೂನಿವರ್ಸ್ ಕರ್ನಾಟಕ ವಿಜೇತರಾದ ಕುಮಾರಿ ಲೇಖನ ಮಲ್ಲಿಕಾರ್ಜುನ ಹೆಗ್ಡೆಯವರನ್ನು ಗೌರವಿಸಲಾಯಿತು. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದಂತಹ ಸಾಂಸ್ಕೃತಿಕ ಸಮಿತಿಯ ಚೇರ್‌ಪರ್ಸನ್ ಶ್ರೀ ರಮೇಶ್ ಜಿ. ಶೆಟ್ಟಿ, ಸಂಚಾಲಕರಾದ ಶ್ರೀ ಸಂತೋಷ್ ಶೆಟ್ಟಿ ತಲೇಕಳ ಹಾಗೂ ಅವರ ತಂಡಕ್ಕೆ ಅಭಿನಂದನೆಗಳು.

ಸಂಘದ ಶ್ರೇಯೋಭಿವೃದ್ಧಿಗೆ ಸದಸ್ಯರ ಸಲಹೆ–ಸೂಚನೆ, ಸಹಕಾರ ಅತೀ ಅಗತ್ಯವಿದ್ದು, ದಿನಾಂಕ 02.05.2026ರಂದು ನಡೆಯಲಿರುವ ವಿಶೇಷ ಮಹಾಸಭೆಯಲ್ಲಿ ತಾವೆಲ್ಲಾ ಭಾಗವಹಿಸಿ ಎಲ್ಲರೂ ಒಂದಾಗಿ ಒಟ್ಟಾಗಿ ಚರ್ಚಿಸಿ ಒಮ್ಮತದ ನಿರ್ಧಾರವನ್ನು ತೆಗೆದುಕೊಳ್ಳೋಣ.

ದಿನಾಂಕ 05.04.2026ರಂದು ಸಂಘದ ಪ್ರಾರ್ಥನಾ ಮಂದಿರ ಸಮಿತಿಯ ವತಿಯಿಂದ ಮಕ್ಕಳ ಕುಣಿತ ಭಜನಾ ತರಗತಿಗಳಿಗೆ ಚಾಲನೆಯನ್ನು ನೀಡಲಾಯಿತು. ತರಗತಿಗಳನ್ನು ಆಸಕ್ತಿ ವಹಿಸಿ ಪ್ರಾರಂಭಿಸಿದಂತಹ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಶೋಭಾ ಶೇಖ, ಸಂಚಾಲಕರಾದ ಶ್ರೀ ಪ್ರಸಾದ್ ಕುಮಾರ್ ಶೆಟ್ಟಿ ಮತ್ತು ಅವರ ತಂಡಕ್ಕೆ ಅಭಿನಂದನೆಗಳು.

ಕಳೆದ 68 ವರ್ಷಗಳಿಂದ ಬೆಂಗಳೂರು ಬಂಟರ ಸಂಘವು ಸಮುದಾಯದ ಅಗತ್ಯವಿರುವ ಸದಸ್ಯರುಗಳಿಗೆ ಹಲವಾರು ರೀತಿಯ ಸಹಾಯ ಹಸ್ತವನ್ನು ನೀಡುತ್ತಾ ಬಂದಿದೆ. ಈ ನಿಟ್ಟಿನಲ್ಲಿ 2022ರಲ್ಲಿ ಪ್ರಾರಂಭಿಸಲಾದ ಸಂಕಲ್ಪ ಯೋಜನೆಯೂ ಒಂದು. ಈ ಯೋಜನೆಯಡಿಯಲ್ಲಿ ಪ್ರತೀ ವರ್ಷ ಸುಮಾರು 60 ವಿದ್ಯಾರ್ಥಿಗಳಿಗೆ ಎರಡು ವರ್ಷಗಳ ಉಚಿತ ಪಿಯುಸಿ ಶಿಕ್ಷಣವನ್ನು ನೀಡುತ್ತಾ ಬಂದಿದೆ. ಈ ಯೋಜನೆಯು ನಿರಂತರವಾಗಿ ಮುಂದುವರಿಯಬೇಕೆನ್ನುವ ಉದ್ದೇಶದಿಂದ **‘ಬಂಟ್ಸ್ ವಿದ್ಯಾ ಸಂಕಲ್ಪ ನಿಧಿ’**ಯನ್ನು ಸ್ಥಾಪಿಸಲಾಗಿದೆ. ಸಮುದಾಯದ ಸಹೃದಯ ಸದಸ್ಯ ಬಾಂಧವರು ಈ ಯೋಜನೆಗೆ ದೇಣಿಗೆಯನ್ನು ನೀಡುವುದರ ಮೂಲಕ ನಮ್ಮ ಸಮುದಾಯದ ವಿದ್ಯಾರ್ಥಿಗಳ ಉತ್ತಮ ಭವಿಷ್ಯಕ್ಕೆ ನೆರವಾಗಲು ಸಾಧ್ಯ.

ಇಂತಿ ತಮ್ಮ ಪ್ರೀತಿಯ

**ವಿಜಯ್ ಜೆ. ಶೆಟ್ಟಿ ಹಾಲಾಡಿ**

ಗೌರವ ಕಾರ್ಯದರ್ಶಿ

# ಮದುವೆ–ಸುಸಂಸ್ಕೃತಿ, ಸುಶಿಕ್ಷಿತ ಸಮಾಜ ಭಾರತದ ಮಾದರಿ



ಎ. ಗಿರೀಶ್ ರೈ

ಮದುವೆ ಮಾನವ ಜೀವನದ ಅತೀ ಸುಂದರ ಹಾಗೂ ಮಹತ್ತರ ಸಂಸ್ಕಾರ. ಇದು ಎರಡು ಜೀವಗಳ ಬಂಧನ ಮಾತ್ರವಲ್ಲ, ನಾಲ್ಕಾರು ಕುಟುಂಬಗಳ ಮಧ್ಯೆ ಸಂಬಂಧ ಮತ್ತು ಅನ್ಯೋನ್ಯತೆಯನ್ನು ಬೆಸೆಯುವ ಪವಿತ್ರಕಾರ್ಯ. ಮದುವೆ ಸ್ವರ್ಗದಲ್ಲೆ ನಿಶ್ಚಯವಾಗಿರುತ್ತದೆಂದು ನಾಲ್ನುಡಿ ಇದ್ದರೂ, ವಿವಾಹ ನೆರವೇರುವುದು ಇಲ್ಲೇ. ನಮ್ಮದೇ ದೇಶದ ಋಷಿಗಳು, ದಾಸಕೂಟ ದಾರ್ಶನಿಕರು ಮತ್ತು ಸಂತರು ರಚಿಸಿದ ಮಂತ್ರಸ್ತೋತ್ರ ಪ್ರಾರ್ಥನೆಗಳೂ ಇವೆ. ಇದಲ್ಲದೆ ಮದುವೆ ನೆರವೇರಿಸುವ ಎರಡೂ ಕಡೆಯ ಗುರುಹಿರಿಯರು ಉಪದೇಶಿಸುವ ಮಾರ್ಗದರ್ಶಕ ಸಂಹಿತೆ. ಇದು ತಮ್ಮ ಬದುಕಿನ ಅಮೃತ ಮುಹೂರ್ತದಲ್ಲಿ ಜೀವನ ಮಂಗಳಮಯವಾಗಿರಲೆಂದು ದೇವರನ್ನು ಬೇಡಿಕೊಳ್ಳುತ್ತಾ ಬದುಕಿನ ಸತ್ಯಾನ್ವೇಷಣೆಯ ಪಥದಲ್ಲಿ ಮುನ್ನಡೆಯುತ್ತಾರೆ.

ದೇಶದ ಎಲ್ಲೋ ಹುಟ್ಟಿ, ಬೆಳೆದು ಯಾವುದೇ ತೆರನಾದ ಪರಿಚಯವಿಲ್ಲದ ಗಂಡು–ಹೆಣ್ಣು ಮದುವೆಯ ನಂತರ ಜೀವನ ಪರ್ಯಂತ ಜೊತೆಯಾಗಿ ಬಾಳುವ ಅತ್ಯಂತ ಅಪೂರ್ವ ಬಾಂಧವ್ಯ ಮದುವೆ. ಜೀವನ ಸಾರಥಿಯನ್ನು ಹುಡುಕುವುದು ಪ್ರಯಾಸದ ಕಾರ್ಯ. ವಯಸ್ಸಿಗೆ ಬಂದ ಕನ್ಯೆಯರು ಮದುವೆ ವಿಚಾರದಲ್ಲಿ ಅತೀ ರಂಜಿತ ಕನಸುಗಳನ್ನು ಕಂಡಿರುತ್ತಾರೆ. ನನ್ನ ಕೈ ಹಿಡಿಯುವವನು ಸುಂದರ ಮತ್ತು ಉತ್ತಮ ಗುಣ ನಡತೆಯವನಾಗಿರಬೇಕು. ನನ್ನ ಜೀವನದಲ್ಲಿ ಮುಂದೇನಾಗುತ್ತದೊ ಎಂಬ ಅನುಮಾನ ಹಾಗೂ ಅವ್ಯಕ್ತ ಭಯ ಮಿಶ್ರಿತ ಕುತೂಹಲವಿರುವುದು ಸಹಜ. ಹುಡುಗನ ಪೋಷಕರಿಗೆ ಸುಂದರಿ, ಸುಶೀಲೆ ಕನ್ಯೆ ಬೇಕು. ಮಹಿಳೆಯರ ಸೌಂದರ್ಯವನ್ನು ಪ್ರಪಂಚದ ಎಲ್ಲಾ ಸಾಹಿತ್ಯಗಳಲ್ಲಿ, ಚಿತ್ರಗೀತೆಗಳಲ್ಲಿ ಅತ್ಯಂತ ಮನೋಹರವಾಗಿ ಬಣ್ಣಿಸಲಾಗಿದೆ.

ವಿಶ್ವದಲ್ಲಿ ಮದುವೆ ಸಂಸ್ಕೃತಿ, ಆಚಾರ ವಿಚಾರ ಭಾವನೆಗಳು ಗಟ್ಟಿಯಾಗಿರುವ ಅತೀವ ಬೆಲೆ ನೀಡುವ ದೇಶ ಭಾರತ. ನಮ್ಮ ಮದುವೆ ಪದ್ಧತಿ ಜೀವನಪರ್ಯಂತವಿರುವ ವಿಧಾನ ವಿಶಿಷ್ಟ. ಗಂಡನ ಮನೆಗೆ ಪ್ರೀತಿಯ ಸಾಕಾರ ಮೂರ್ತಿಯಾಗಬೇಕು, ಕುಟುಂಬದ ಕಣ್ಣಾಗಬೇಕು, ಮನೆಗೆ ಮಗಳಾಗಿ ಬರಬೇಕೆಂಬ ವರನ ಮನೆಯವರ ನಿರೀಕ್ಷೆ.

ಇಂಗ್ಲೀಷ್ ಸಾಹಿತ್ಯ ಹತ್ತೊಂಭತ್ತನೇ ಶತಮಾನದಲ್ಲಿ ಒಂದು ಪರಿವರ್ತನೆಯಾಗಿತ್ತು. ವಿಲಿಯಂ ವರ್ಡ್ಸ್‌ವರ್ತ್ (1770–1850) ಮತ್ತು ಕೂಲ್ ರಿಡ್ಜ್ (1788–1824) ರಚಿಸಿದ್ದ The Lyrical ballad ಪುಸ್ತಕದ ಬಿಡುಗಡೆಯೊಂದಿಗೆ Romantic Period ಪ್ರಾರಂಭವಾಯಿತು. ಇದರ ವಿಧಾತನಂತಿದ್ದ ವಿಲಿಯಂ ವರ್ಡ್ಸ್‌ವರ್ತ್ ಪ್ರಕೃತಿ ಪ್ರಿಯನಾಗಿದ್ದ. ಇವನ ಸಮಕಾಲೀನರಾಗಿದ್ದ ಕೂಲ್‌ರಿಡ್ಜ್ ಸೌಂದರ್ಯವನ್ನು ಜನಪ್ರಿಯ ಗೊಳಿಸಿದ್ದರು. ಇವರ ನಂತರದ ತಲೆಮಾರಿನ ಬೈರೊನ್ ಜಾನ್ ಕೀಟ್ಸ್ ಮತ್ತು ಪಿ ಬಿ ಶೆಲ್ಲಿಯವರು "ಬ್ಯೂಟಿ ಮುಖ್ಯವಾಗಿ ಹೆಣ್ಣಿನ ಸೌಂದರ್ಯವನ್ನು" ತಮ್ಮ ಕೃತಿಗಳಲ್ಲಿ ಅತ್ಯಂತ ಮನೋಜ್ಞವಾಗಿ ಕೊಂಡಾಡಿದ್ದಾರೆ. A thing of beauty is a joy forever ಎಂದಿದ್ದ ಚೆಲುವಿನ ಬೆನ್ನು ಹತ್ತಿದ್ದ ಕೀಟ್ಸ್ ಸೌಂದರ್ಯದ ಅನ್ವೇಷಣೆಯಲ್ಲಿ ತಲ್ಲೀನನಾಗಿದ್ದ.

ಪೌರಾಣಿಕ ಆದರ್ಶ ದಂಪತಿಗಳಾದ ಅಯೋಧ್ಯೆಯ ರಾಜ ಶ್ರೀರಾಮಚಂದ್ರ ಮತ್ತು ಸೀತಾದೇವಿ, ಕಲಿಯುಗದ ಆದರ್ಶ ದಂಪತಿಗಳಾದ ರಾಮಕೃಷ್ಣ ಪರಮಹಂಸ ಮತ್ತು ಮಹಾಮಾತೆ ಶಾರದಾದೇವಿ, ಇವರನ್ನು ಮದುವೆ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು. ಮದುವೆಯಾದ ಪ್ರಾರಂಭದಲ್ಲಿ ಎಲ್ಲವೂ ಚೆನ್ನಾಗಿರುತ್ತದೆ. ಸಂತೋಷದಿಂದ ಇರುತ್ತೇವೆ ಎನ್ನುವುದು ವಿವಾಹಕ್ಕೆ ಮುಂಚಿನ ಕನಸು. ಆದರೆ ಇದು ಕನಸಿನಲ್ಲೇ ಕರಗಿ ಹೋಗದಂತೆ ಎಚ್ಚರ ವಹಿಸಬೇಕು. ಸಮಯ ಕಳೆದಂತೆ ದಂಪತಿಗಳ ಮಧ್ಯೆ ಭಿನ್ನಾಭಿಪ್ರಾಯ ಮೂಡಲು ಎಡೆ ನೀಡಬಾರದು. ವಿಶ್ವಾಸ, ತಾಳ್ಮೆ ಒಬ್ಬರನ್ನೊಬ್ಬರು ಗೌರವಿಸುವುದೇ ಮುಂತಾದ ಸರ್ವಕಾಲಿಕ ಬದಲಾಗದ ಗುಣ ವಿಶೇಷಗಳಿದ್ದರೆ ಬದುಕು ಬಂಗಾರ. "ಬದುಕೆಂಬ ಶಾಂತಸಾಗರದಲ್ಲಿ ಬಿರುಗಾಳಿ ಎದ್ದರೆ ನೌಕೆಯನ್ನು ದಡ ಸೇರಿಸುವುದು ಪ್ರಯಾಸದ ಕೆಲಸ". ಹೆಣ್ಣಿನ ಬದುಕಿನ ಪ್ರತೀ ಘಟ್ಟದಲ್ಲಿ ಕನಸು, ನಿರೀಕ್ಷೆ, ನಲಿವು, ಹತಾಶೆಯನ್ನು ಜಾನಪದ ಗೀತೆಗಳಲ್ಲಿ ಮನಮುಟ್ಟುವಂತೆ ಬಣ್ಣಿಸಿದ್ದಾರೆ.

'ಹಚ್ಚಡದ ಪದರಾಗ ಅಚ್ಚಮಲ್ಲಿಗೆ ಹೂವ ಬಿಚ್ಚಿ ನನ ಮ್ಯಾಗ
ಬಗೆವಂಥರಾಯರನ ಬಿಟ್ಟ್ಯಾಂಗ ಬರಲೇ ಹಡೆದವ್ವ?

ತವರಿನಿಂದ ಕರೆ ಬಂದರೂ ಹೋಗಲಾರದಂತಹ ವಿರಹವನ್ನು ಈ ರೀತಿಯಾಗಿ ಬಿಚ್ಚಿಡುತ್ತಾರೆ. ದಾಂಪತ್ಯದಲ್ಲಿ ಹೆಜ್ಜೆ ಹೆಜ್ಜೆ ಸೈರಣೆ ಬೆರೆಸಿ ವಿರಸ ಕಲಹ ತಡೆಯಬೇಕು.


ಪ್ರೀತಿ ಕೇವಲ ಭಾವನೆಯಾಗದೆ, ಅದು ಜೀವನಪರ್ಯಂತ ಬದ್ಧತೆಯಾಗಬೇಕು. ಕೆಲವು ಕನ್ನಡ ಸಿನಿಮಾಗಳಲ್ಲಿ ಹೆಣ್ಣಿನ ಸೌಂದರ್ಯವನ್ನು ನಾನಾ ರೀತಿಯಲ್ಲಿ ಹಾಡಿ ಹೊಗಳಿದ್ದಾರೆ. ಹಾಲಲಿ ಮಿಂದವಳು ದಂತದ ಮೈಯವಳು ಹುಣ್ಣಿಮೆ ಹೆಣ್ಣಾದಳು ಎಂದು ಬಣ್ಣಿಸಲಾಗಿತ್ತು.

ನಮ್ಮ ಸಮಾಜದಲ್ಲಿ ಇಂದಿಗೂ ಮದುವೆಗಳು ಕುಟುಂಬದ ಹಿರಿಯರು ನಿರ್ಧರಿಸಿದಂತೆ ನೆರವೇರುತ್ತವೆ. ಇಂದಿನಂತೆ ವಿವಾಹ ವೇದಿಕೆಗಳು, ಮ್ಯಾಟ್ರಿಮೋನಿಯಲ್ ತಾಣಗಳು ಇರಲಿಲ್ಲ. ಎಲ್ಲವೂ ಸುಸೂತ್ರವಾಗಿ ನಡೆಯುತ್ತವೆ. ಓರ್ವ ಉತ್ತಮ ಪತ್ನಿಯ ಋಣವನ್ನು ಪತಿ ತೀರಿಸುವುದು, ಅಂತೆಯೇ ಉತ್ತಮ ಗಂಡನ ಋಣವನ್ನು ಹೆಂಡತಿ ತೀರಿಸುವುದು ಅಸಂಭವ. ಅಮೇರಿಕಾದ ನಲವತ್ತನೇ ಅಧ್ಯಕ್ಷರಾಗಿದ್ದ ರೊನಾಲ್ಡ್ ರೇಗನ್ ತನ್ನ ಮಗ ಮೈಕಲ್ ವೈವಾಹಿಕ ಜೀವನಕ್ಕೆ ಕಾಲಿಡುವ ಸಂದರ್ಭದಲ್ಲಿ ದಾಂಪತ್ಯದ ಮಹತ್ವವನ್ನು ತಿಳಿಸುವ ಸಲುವಾಗಿ ಬುದ್ಧಿವಾದ ರೂಪದಲ್ಲಿ ಬರೆದಿದ್ದ ಪತ್ರದ ಅನುವಾದ "ನಿನ್ನ ಗಲೀಜು ಬಟ್ಟೆ ತೊಳೆಯುವುದು, ಗಡ್ಡಬಿಟ್ಟಿರುವ ವೇಷದಲ್ಲೇ ನೋಡಿ ಸಹಿಸಿಕೊಳ್ಳುವುದು, ಗೊರಕೆಯನ್ನು ಅಲಕ್ಷಿಸುವುದು ಹೆಂಡತಿಯಿಂದ ಮಾತ್ರ ಸಾಧ್ಯ. ಆಕೆ ಕೊಡುವ ಪ್ರೀತಿಗೆ ಬೆಲೆ ಕಟ್ಟಲಾಗುವುದಿಲ್ಲ. ಹೆಂಡತಿಗೆ ಎಂದೂ ಮೋಸ ಮಾಡಬೇಡ, ಸುಳ್ಳು ಹೇಳಬೇಡ, ವೈವಾಹಿಕ ಬದುಕಿನಲ್ಲಿ ಪ್ರೀತಿ ಮತ್ತು ವಿಶ್ವಾಸ ನೀಡಿದಷ್ಟು ಬದುಕು ಸುಂದರ ಎನ್ನುವುದನ್ನು ಮರೆಯಬೇಡ."

**ವಿವಾಹ ವೇದಿಕೆ:–** ಇತ್ತೀಚೆಗೆ ವಿವಾಹ ಯೋಗ್ಯ ಹುಡುಗ, ಹುಡುಗಿಯರು ಅದೇಕೊ ಮದುವೆಯನ್ನು ಮುಂದೂಡಲು ಬಯಸುತ್ತಾರೆ. ಉತ್ತಮ ಕೆಲಸ ದೊರಕಿ ಕೈತುಂಬಾ ಗಳಿಕೆಯಿದೆ. ಅವರು ಮದುವೆ, ಮನೆ ಹುಡುಕುವುದೇ ಮುಂತಾದ ಜವಾಬ್ದಾರಿ ನಿಭಾಯಿಸಲು ತಯಾರಿಲ್ಲ. ವಿದೇಶಗಳಲ್ಲಿ ಈ ಸಮಸ್ಯೆ ಇದ್ದರೂ ನಮ್ಮ ದೇಶದಲ್ಲಿ ಮೊದಲು ಇರಲಿಲ್ಲ. ಈಗ ಇದು ಅಧಿಕವಾಗುತ್ತಿದೆ. ಜಗತ್ತಿನ ಜನಸಂಖ್ಯೆಯಲ್ಲಿ ಭಾರತ ಮತ್ತು ಚೀನಾ ಸರಿ ಸುಮಾರು ಶೇಕಡಾ 25ರಿಂದ 30 ಇದೆ. ಮದುವೆ ಆದರೂ ಮಕ್ಕಳು ಈಗ ಬೇಡವೆನ್ನುವವರ ಸಂಖ್ಯೆ ಹೆಚ್ಚಾಗುತ್ತಿದೆ. ಈ ಸಮಸ್ಯೆ ಕ್ರಮೇಣ ಉಲ್ಬಣವಾಗಲಿದ್ದು, ಸ್ತ್ರೀ, ಪುರುಷ ಅನುಪಾತ ಏರುಪೇರಾಗಲಿದೆ. ಚೀನಾದಲ್ಲಿ ಸುಮಾರು ನೂರು ಮಿಲಿಯನ್ ಯುವಕ ಯುವತಿಯರು ಮದುವೆಯನ್ನು ವಿನಾ ಕಾರಣ ಮುಂದೂಡುತ್ತಿದ್ದಾರೆಂದು ಚೀನಾ ಸರಕಾರ ವರದಿ ಮಾಡಿದೆ. ಒಂಟಿ ಜೀವನ ಬಯಸುವವರನ್ನು ಮದುವೆಯಾಗಿಸಲು ಸರಕಾರ ಹಲವು ಯೋಜನೆಗಳನ್ನು ರೂಪಿಸಿದೆ. ಮದುವೆ ಕುಟುಂಬ, ಪ್ರೀತಿ, ಸುಶಿಕ್ಷಿತ ಹಾಗೂ ಸುಸಂಸ್ಕೃತ ಸಮಾಜ ರೂಪಿಸಲು ಅಲ್ಲಿನ ಕಮ್ಯೂನಿಸ್ಟ್ ಪಕ್ಷದ ಯುವ ಘಟಕ ಈ ಕಾರ್ಯದಲ್ಲಿ ತೊಡಗಿದೆ. ಅದ್ದೂರಿ ಮದುವೆಗೆ ಕಡಿವಾಣ ಹಾಕಲು ಮತ್ತು ಸಾಂಕೇತಿಕವಾಗಿ ಉಡುಗೊರೆ ನೀಡಲು ಚೀನಾ ಸರಕಾರದ "Ministry of Civil Affairs" ತಿಳಿಸಿದೆ ಎಂದು "The South Chaina Morning Post" ಪತ್ರಿಕೆ ಈ ಹಿಂದೆ ವರದಿ ಮಾಡಿತ್ತು. ಈ ತರದ ಕ್ರಮ ನಮ್ಮ ದೇಶದಲ್ಲೂ ಕಾರ್ಯಗತವಾಗಬೇಕು. ದೇಶದ ಕೆಲವು ಸಂಘ–ಸಂಸ್ಥೆಗಳು ಒಂದು ಕುಟುಂಬಕ್ಕೆ ಮೂರು ಮಕ್ಕಳ ಅಗತ್ಯದ ಕುರಿತು ಮನವಿ ಮಾಡುತ್ತಾರೆ. ಜನಿಸುವ ಪ್ರತಿಯೊಂದು ಮಗು ಎರಡು ಕೈಗಳನ್ನು, ಎರಡು ಕಾಲುಗಳನ್ನು ಹೊಂದಿದ್ದು, ದೊಡ್ಡವರಾದ ನಂತರ ಅವರವರ ಅರ್ಹತೆಗೆ ತಕ್ಕಂತೆ ದುಡಿಯುತ್ತಾರೆ. ಅವರಿಂದಲೂ ದೇಶದ ಸಂಪತ್ತು ವೃದ್ಧಿಯಾಗುತ್ತದೆ ಎಂಬುದು ಅರ್ಥಶಾಸ್ತ್ರಜ್ಞರ ಅಭಿಪ್ರಾಯ.

ವಿಶ್ವದ ಬಹುತೇಕ ದೇಶಗಳಲ್ಲಿ ಅಲ್ಲಿನ ಜಾತಿ ಮತ ಸಂಸ್ಕೃತಿಗೆ ಅನುಸಾರವಾಗಿ ಮದುವೆ ಸಮಾರಂಭಗಳು ನಡೆಯುತ್ತಿದ್ದವು. Anthropologist ಸರಿ ಸುಮಾರಿ 4350 ವರ್ಷಗಳ ಪೂರ್ವದಲ್ಲೇ ಮದುವೆ ಸಮಾರಂಭಗಳು ಪ್ರಾರಂಭವಾಗಿದ್ದವು ಎಂದು ಅಭಿಪ್ರಾಯಪಟ್ಟಿದ್ದರು. ಮೆಸಪೊಟೋಮಿಯಾದಲ್ಲಿ 2350 ಬಿ.ಸಿ ಯಲ್ಲಿ ಮದುವೆ ಸಮಾರಂಭ ನಡೆದಿರುವುದಕ್ಕೆ ಸಾಕ್ಷಿ ಇದೆ. ಇಂತಹ ಮದುವೆ ಸಮಾರಂಭಗಳಲ್ಲಿ ಉಂಗುರಗಳನ್ನು ಗಂಡು –ಹೆಣ್ಣು ತೊಡಿಸಲಾಗುತಿತ್ತು ಎಂದು ಉಲ್ಲೇಖಿಸಲಾಗಿದೆ. ಶ್ರೀಮಂತರ ಮದುವೆಯಲ್ಲಿ ಚಿನ್ನ ಬೆಳ್ಳಿ ಉಂಗುರಗಳನ್ನು ತೊಡಿಸುತ್ತಿದ್ದರು. ಈ ಸಮಾರಂಭಗಳಲ್ಲಿ ವಧು–ವರನ ತಲೆ ಮೇಲೆ ಸಾಂಕೇತಿಕವಾಗಿ ಅಕ್ಕಿ ಕಾಳು ಪ್ರೋಕ್ಷಿಸುವುದು, ಪುಷ್ಪಗುಚ್ಛ ನೀಡುವುದು ನಡೆಯುತ್ತಿತ್ತು. ಆಹಾರ ಧಾನ್ಯಗಳು ಹೆಚ್ಚು ಹೆಚ್ಚಾಗಿ ಬೆಳೆಯಲಿ, ಮಕ್ಕಳು ಹುಟ್ಟಲಿ ಎಂಬುದು ಇದರ ಉದ್ದೇಶ. ಅಂತೆಯೇ ವಿವಿಧ ಗಿಡಮೂಲಿಕೆಗಳನ್ನೊಳಗೊಂಡ ಪುಷ್ಪಗುಚ್ಛ ಫರ್ಟಿಲಿಟಿ ಉದ್ದೀಪನಗೊಳ್ಳಲು ನೆರವಾಗುತ್ತದೆ ಎಂಬ ನಂಬಿಕೆ ಇತ್ತು.

ರಾಷ್ಟ್ರಕವಿ ಕುವೆಂಪುರವರು "ಮಂತ್ರ ಮಾಂಗಲ್ಯವೆಂಬ" ವಿವಾಹ ವಿಧಾನವನ್ನು ಅವರ ಒಂದು ಪುಸ್ತಕದಲ್ಲಿ ವಿವರಿಸಿದ್ದಾರೆ. ವರದಕ್ಷಿಣೆ ಇಲ್ಲದೆ, ದುಂದು ವೆಚ್ಚ ಮಾಡದೆ ನೆರವೇರಿಸಬಹುದು. ಮದುವೆಯಲ್ಲಿ ಉಡುಗೊರೆಗಳನ್ನು ನೀಡುವಂತಿಲ್ಲ. ಇದನ್ನು ಮುಂದಿನ ದಿನಗಳಲ್ಲಿ ನೀಡಬಹುದೆಂದು ಪುಸ್ತಕದಲ್ಲಿ ತಿಳಿಸಲಾಗಿದೆ.



ಮಂತ್ರಮಾಂಗಲ್ಯ / ೨೧

ಶ್ರೀ

"ಚಿತ್ರಕೂಟ",
ಗೋಣಿಬೀಡು ಅಂಚೆ, ದಿನಾಂಕ 27/11/1966
ಚಿಕ್ಕಮಗಳೂರು ಜಿಲ್ಲೆ.

ಶ್ರೀಯುತ/ ಶ್ರೀಮತಿ

ನಾವೆಲ್ಲರೂ ಕ್ಷೇಮ ಎಂದು ಹಾರೈಸುತ್ತೇವೆ.

ಈ ಕಾಗದ ಬರೆಯುತ್ತಿರುವ ವಿಶೇಷ ಕಾರಣ ಏನೆಂದರೆ: ನಮ್ಮ ಜ್ಯೇಷ್ಠಪುತ್ರ ಚಿರಂಜೀವಿ ಕೆ. ಪಿ. ಪೂರ್ಣಚಂದ್ರ ತೇಜಸ್ವಿ ಎಂ.ಎ., ಮತ್ತು ದಿವಂಗತ ಶ್ರೀ ರಂಗಪ್ಪನವರ ಪುತ್ರಿ ಕುಮಾರಿ ಆರ್. ರಾಜೇಶ್ವರಿ ಎಂ.ಎ., ಇವರಿಗೆ ದಿನಾಂಕ 27-11-1966 ರಂದು "ಚಿತ್ರಕೂಟ"ದಲ್ಲಿ ಮದುವೆ ನಡೆಯುತ್ತದೆ. ನಮ್ಮ ಹಿತೈಷಿಗಳಾದ ತಾವು ತಮಗೆ ಅನುಕೂಲವಿರಾಮ ದೊರೆತಾಗ "ಚಿತ್ರಕೂಟ"ಕ್ಕೆ ಆಗಮಿಸಿ, ವಧೂವರರ ಆತಿಥ್ಯ ಸ್ವೀಕರಿಸಿ, ಅವರನ್ನು ಆಶೀರ್ವದಿಸಿ, ಅವರ ಶ್ರೇಯೋಭಿವೃದ್ಧಿ ಕೋರಬೇಕೆಂದು ವಿಜ್ಞಾಪಿಸಿಕೊಳ್ಳುತ್ತೇವೆ.

ಇತಿ
ಕುವೆಂಪು ದಂಪತಿ




# ಬಂಟರ ಸಂಘ ಬೆಂಗಳೂರು
# BUNTS' SANGHA BANGALORE

## ಸಮಾಜ ಸೇವಾ ಸಮಿತಿ ಮತ್ತು ಸೇವಾದಳ
## ಸೇವಾ ಸಮಾಗಮ–2026

ದಿನಾಂಕ: 16.05.2026, ಶನಿವಾರ
ಸ್ಥಳ: ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನ, ವಿಜಯನಗರ, ಬೆಂಗಳೂರು
ಸಮಯ: ಬೆಳಿಗ್ಗೆ 09.00ರಿಂದ

**ಕಾರ್ಯಕ್ರಮಗಳು:–**
ರಕ್ತದಾನ ಶಿಬಿರ
ಉಚಿತ ಆರೋಗ್ಯ ತಪಾಸಣಾ ಶಿಬಿರ
ಉಚಿತ ಹೊಲಿಗೆ ಯಂತ್ರ ವಿತರಣೆ
ಆರ್ಥಿಕ ನೆರವು
ಮನೋರಂಜನಾ ಕಾರ್ಯಕ್ರಮ

**ತಮಗೆ ಆದರದ ಸ್ವಾಗತ**

**ವಿಜಯ್ ಜಿ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಸಿ.ಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಪ್ರತಾಪ್ ಶೆಟ್ಟಿ**
ಚೇರ್‌ಪರ್ಸನ್, ಸೇವಾದಳ

**ಅಜಿತ್ ಕುಮಾರ್ ಶೆಟ್ಟಿ ಕೆ.**
ಚೇರ್‌ಪರ್ಸನ್, ಸಮಾಜ ಸೇವಾ ಸಮಿತಿ

**ಅಮರನಾಥ ಶೆಟ್ಟಿ**
ಸಂಚಾಲಕರು, ಸೇವಾದಳ

**ಕುಶಲ ಶೆಟ್ಟಿ**
ಸಂಚಾಲಕರು, ಸಮಾಜ ಸೇವಾ ಸಮಿತಿ

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಸಮಾಜ ಸೇವಾ ಸಮಿತಿ ಹಾಗೂ ಸೇವಾದಳಾ ಸಮಿತಿ ಸದಸ್ಯರು**

# ಮನದ ಮನೆಗೆ ಮಲ್ಲಿಗೆಯಾಗು



ನೈಲಾಡಿ ಚಾವಡಿಮನೆ
ಗೀತಾ ಶೆಟ್ಟಿ

ಬಿದಿರೊಂದು ಬ್ರಹ್ಮದೇವನಿಗೆ ಎದುರಾಗಿ ಕೇಳಿತಂತೆ, ಬೇಕಿತ್ತೇ ನಿನಗೆ ಈ ಸೃಷ್ಟಿಯೊಳಗೆ ನನ್ನದೊಂದು ಪಾತ್ರ?! ಹೂವಿಲ್ಲ, ಹಣ್ಣಿಲ್ಲ, ದಣಿದು ಬಂದವರಿಗೆ ನೆರಳೂ ಕೂಡ ನೀಡಲಾಗುವುದಿಲ್ಲ. ಅದಕ್ಕೆ ಬ್ರಹ್ಮದೇವ ನಕ್ಕು ನುಡಿದರಂತೆ, ಯಾಕೆ ಸಾಧ್ಯವಿಲ್ಲ ಮನಸ್ಸು ಮಾಡಿ ನೋಡೊಮ್ಮೆ ಅಂತ. ಬಿದಿರು ಹಠ ಹಿಡಿದು ಬೆಳೆಯಿತಂತೆ. ಕೃಷ್ಣನ ಕೈಯಲ್ಲಿನ ಕೊಳಲಾಯಿತಂತೆ. ಮಕ್ಕಳ ತೂಗುವ ತೊಟ್ಟಿಲಾಯಿತಂತೆ. ಸುಮಂಗಲಿಯರಿಗೆ ಬಾಗಿನ ಕೊಡುವ ಮೊರವಾಯಿತಂತೆ. ಬಡವನ ಗುಡಿಸಲಿಗೆ ನೆರಳಾಯಿತು. ಬಟ್ಟೆ ಒಣಗಿಸುವ ಕೋಲಾಯಿತಂತೆ. ಬಿದಿರಿನ ಬುಟ್ಟಿಯಾಯಿತಂತೆ. ಕಡೆಗೆ ಶವ ಎತ್ತಲು ಚಟ್ಟವಾಯಿತಂತೆ. ಮನುಷ್ಯನಿಗೊಂದು ಗುಟ್ಟು ಹೇಳಿತಂತೆ. ನನ್ನಿಂದೇನಾಗದು ಎಂದು ಕೈ ಚೆಲ್ಲದಿರು ಮನುಜ, ಮನಸು ಮಾಡಿ ನೋಡೊಮ್ಮೆ ಅಂತ. ಸೇವೆ ಎಲ್ಲರಿಗೂ ಮಾಡು ಆದ್ರೆ ಪ್ರತಿಫಲ ಯಾರಲ್ಲೂ ಬಯಸಬೇಡ. ಸೇವೆಯ ಪ್ರತಿಫಲ ನೀಡುವವನು ಭಗವಂತನೆ ವಿನಹಃ ಮನುಷ್ಯನಲ್ಲ. ಸಂಬಂಧ ಎನ್ನುವುದು ಹೃದಯದಿಂದ ಕೂಡಿರಬೇಕೇ ಹೊರತು ಅವಶ್ಯಕತೆಯಿಂದಲ್ಲ. ಕೆಸರು ನೀರಿನಲ್ಲಿ ಶುದ್ಧ ನೀರು ತೆಗೆಯುವುದು ಕಷ್ಟವೇನಲ್ಲ. ಸ್ವಲ್ಪ ತಾಳ್ಮೆ ವಹಿಸಿದರೆ ನಮ್ಮ ಕಷ್ಟಗಳು ಅವಮಾನಗಳು ತಿಳಿಯಾಗಿ ಒಳ್ಳೆ ಕಾಲ ಬಂದೇ ಬರುತ್ತದೆ. ದೇಹದಲ್ಲಿ ಎಷ್ಟು ಶಕ್ತಿ ಇದೆ ಎಂಬುದು ಮುಖ್ಯವಲ್ಲ, ಹೃದಯದಲ್ಲಿ ಎಷ್ಟು ಧೈರ್ಯ ಪ್ರೀತಿ ಇದೆ ಎಂಬುದು ಮುಖ್ಯ. ಒಂದು ಸೋಲಿನಿಂದ ನೋವು–ಕಣ್ಣೀರು ಹಾಕಿದೆ ಎಂದು ನೊಂದುಕೊಳ್ಳಬೇಡ. ಆ ಒಂದು ನೋವಿನಿಂದ ಲಕ್ಷಗಟ್ಟಲೆ ಅನುಭವ ಪಡೆದೆನೆಂದು ಖುಷಿ ಪಡು. ಬೇರೆಯವರು ನಿಮ್ಮನ್ನು ತಪ್ಪಾಗಿ ತಿಳಿದುಕೊಂಡರೆ ಬೇಸರಿಸಬೇಡಿ ಯಾಕೆಂದರೆ ಅವರವರ ತಿಳುವಳಿಕೆ ಎಷ್ಟಿದೆಯೋ ಅಷ್ಟೇ ನಿಮ್ಮನ್ನು ತಿಳಿದುಕೊಂಡಿರುತ್ತಾರೆ. ಅದರಲ್ಲಿ ನಿಮ್ಮ ತಪ್ಪೇನಿಲ್ಲ.

ಉನ್ನತ ಜೀವನಕ್ಕೆ ಭಗವದ್ಗೀತೆಯ ಸಾರಾಂಶಕ್ಕಿಂತ ಮತ್ತೊಬ್ಬ ಗುರು ಬೇಕೇ? ಬದುಕಿನ ಎಲ್ಲಾ ಸಮಸ್ಯೆಗಳಿಗೆ ನಮ್ಮ ಆಲೋಚನೆಗಳೇ ಮೂಲ ಕಾರಣ. ಸರಿಯಾದ ಜ್ಞಾನವೇ ಬದುಕಿನ ಎಲ್ಲ ಸಮಸ್ಯೆಗಳಿಗೆ ಅತ್ಯುತ್ತಮ ಪರಿಹಾರ. ನಿಸ್ವಾರ್ಥದಿಂದ ಮಾಡುವ ಯಾವ ಕೆಲಸವೂ ನಿನ್ನನ್ನು ನೋಯಿಸದು. ನಿನ್ನ ಬದುಕಿನಲ್ಲಿ ನಡೆಯುವುದೆಲ್ಲವೂ ನಿನ್ನ ಕರ್ಮದ ಫಲವೇ ಆಗಿದೆ. ನಾನು ಮಾತ್ರವೇ ಎನ್ನುವ ಅಹಂಕಾರವನ್ನು ಬಿಟ್ಟಾಗ ಮಾತ್ರವೇ ಪ್ರಪಂಚ ನೀಡುವ ಖುಷಿ ನಿನಗೆ ಸಿಗುತ್ತದೆ. ಪ್ರತಿದಿನವೂ ನಿನ್ನನ್ನು ನೀನು ಸುಧಾರಿಸಿಕೊಳ್ಳಲು ಪ್ರಯತ್ನಿಸು. ಬದುಕಿನಲ್ಲಿ ಸಮಸ್ಯೆಗಳಿಂದ ಸಿಗುವ ಅನುಭವದೊಂದಿಗೆ ಬದುಕು ನಡೆಸು. ಸುಲಭವಾಗಿ ಸೋಲೊಪ್ಪಿಕೊಳ್ಳಬೇಡ, ಆತ್ಮವಿಶ್ವಾಸ ಜೊತೆಗಿರಲಿ. ನಿನ್ನ ಬಳಿ ಏನಿದೆಯೋ ಅದನ್ನು ಗೌರವಿಸುವುದನ್ನು ಕಲಿ. ಬದುಕಿನ ಹೆಚ್ಚು ಕ್ಷಣಗಳನ್ನು ಭಗವಂತನಿಗಾಗಿ ಮೀಸಲಿಡು. ಸತ್ಯವನ್ನು ಸತ್ಯವಾಗಿ ಕಾಣು ಮತ್ತು ಸತ್ಯಕ್ಕೆ ತಲೆಬಾಗು. ಉನ್ನತ ಆಲೋಚನೆಗಳಿಗೆ ಮನಸ್ಸನ್ನು ಮೀಸಲಿರಿಸು. ನಶ್ವರ ಜಗತ್ತಿನ ಮಾಯೆಗಳಿಗೆ ಸೋಲದೆ ಆಧ್ಯಾತ್ಮಕ್ಕೆ ಶರಣಾಗು. ನಿನ್ನ ಯೋಜನೆಗೆ ಸರಿಹೊಂದುವ ಜೀವನಶೈಲಿ ನಿನ್ನದಾಗಿರಲಿ. ಆಧ್ಯಾತ್ಮ ಮತ್ತು ಧರ್ಮಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡು. ಒಳ್ಳೆಯದರ ಪ್ರತಿಫಲ ಒಳ್ಳೆಯದೇ ಆಗಿರುತ್ತದೆ ಎಂಬುದನ್ನು ನೆನಪಿಡು. ಖುಷಿಯನ್ನು ಕಾಪಾಡಿಕೊಳ್ಳುವುದು ನಿನ್ನ ಅತಿದೊಡ್ಡ ಸಾಧನೆ ಶಕ್ತಿಯಾಗಿರುತ್ತದೆ. ನಿನ್ನ ಖುಷಿಯನ್ನು ಕಾಪಾಡಿಕೊಳ್ಳುವುದು ನಿನ್ನ ಅತಿ ದೊಡ್ಡ ಸಾಧನೆ. ನಿನ್ನ ಮನಸ್ಸಿಗೆ ನೀನು ಮಲ್ಲಿಗೆಯಾಗಿ ಘಮಘಮಿಸಬೇಕು. ಶ್ರೀ ಕೃಷ್ಣಾರ್ಪಣ ಮಸ್ತು.

## ಅಭಿನಂದನೆಗಳು



ಶ್ರೀಮತಿ ಕಾಂತಿ ಶೆಟ್ಟಿ

ನಮ್ಮ ಸಂಘದ ಮಹಿಳಾ ಉಪಾಧ್ಯಕ್ಷೆ, Aircom Solution Private Limited ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿ ಮತ್ತು ನಮ್ಮ ಕುಟೀರ ಫೌಂಡೇಶನ್‌ನ ಸಂಸ್ಥಾಪಕ ಟ್ರಸ್ಟಿಯಾಗಿ ಉದ್ಯಮ ಹಾಗೂ ಸಮಾಜ ಸೇವೆಯಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿರುವ ಶ್ರೀಮತಿ ಕಾಂತಿ ಶೆಟ್ಟಿಯವರಿಗೆ ದಿನಾಂಕ 29.03.2026ರಂದು ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ 'ಉದ್ಯೋಗ ಯೋಗದಾನ ಪುರಸ್ಕಾರ–2026' ಪ್ರಶಸ್ತಿಯನ್ನು ಚಿತ್ರನಟಿ ಶಿಲ್ಪಾ ಶೆಟ್ಟಿ ಅವರು ನೀಡಿ ಗೌರವಿಸಿದರು. ಇವರಿಗೆ ಬೆಂಗಳೂರು ಬಂಟರ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

# ಉಡುಪಿಯ ಬಂಟರ ಸಂಘ ಸ್ಥಾಪಿಸಿ, ದೀರ್ಘ ಕಾಲದ ಅಧ್ಯಕ್ಷರಾಗಿ ಸುಂದರವಾದ ಅಮ್ಮಣ್ಣಿ ಕೆ.ಪಿ. ರಾಮಣ್ಣ ಶೆಟ್ಟಿ ಸಭಾಂಗಣ ನಿರ್ಮಿಸಿದ ಕಡಂದಲೇ ಪಾಲಡ್ಕ ಮೇಗಿನ ಮನೆ ನಾರಾಯಣ ಶೆಟ್ಟಿ



**ನಾರಾಯಣ ಶೆಟ್ಟಿ**

ಜನನ: 23.04.1932 – ನಿಧನ: 24.12.2025

ಉಡುಪಿಯಲ್ಲಿ 1981ರಲ್ಲಿ ಬಂಟ ಬಾಂಧವರ ಸಂಘಟನೆ ಸ್ಥಾಪಿಸಿ 15 ವರ್ಷಗಳಷ್ಟು ದೀರ್ಘ ಕಾಲ ಉಡುಪಿ ತಾಲೂಕು ಉತ್ತರ ವಲಯ ಬಂಟರ ಸಂಘದ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಸುಂದರವಾದ ಅಮ್ಮಣ್ಣಿ ಕೆ.ಪಿ. ರಾಮಣ್ಣ ಶೆಟ್ಟಿ ಸಭಾ ಭವನ ನಿರ್ಮಿಸಿದ ಉಡುಪಿಯ ಪ್ರಸಿದ್ಧ ಮಂಜುನಾಥ್ ಮೋಟರ್ಸ್ ಸಾರಿಗೆ ಸಂಸ್ಥೆಯ ಆಡಳಿತ ನಿರ್ದೇಶಕರಾಗಿದ್ದ ನಾರಾಯಣ ಶೆಟ್ಟಿಯವರು ಕಡಂದಲೇ ಪಾಲಡ್ಕ ಮೇಗಿನ ಮನೆ ಕಲ್ಯಾಣಿ ಶೆಟ್ಟಿ ಮತ್ತು ಮುಂಡಾಜೆಗುತ್ತು ಸಂಕಪ್ಪ ಶೆಟ್ಟಿ ದಂಪತಿಗಳ ಪುತ್ರ. ಬಾಲ್ಯ ಜೀವನವನ್ನು ಮಂಗಳೂರು ತಾಲೂಕಿನ ಕಳವಾರದಲ್ಲಿ ಕಳೆದು ತಾನು 2 ವರ್ಷದ ಮಗುವಿದ್ದಾಗ ತಂದೆ ಮತ್ತು 5 ವರ್ಷದವನಾಗಿದ್ದಾಗ ತಾಯಿ ವಿಧಿವಶರಾದಾಗ ಅಕ್ಕ ರಮಬಾಯಿ ಗೋಪಾಲ್ ಶೆಟ್ಟಿಯವರು ಇವರನ್ನು ಮುಂದಿನ ವಿದ್ಯಾಭ್ಯಾಸಕ್ಕಾಗಿ ಉಡುಪಿಯ ತನ್ನ ಗಂಡನ ಮನೆಗೆ ಕರೆಸಿ ಇರಿಸಿಕೊಂಡಾಗ ಆಕಸ್ಮಿಕ ವಿಧಿ ಲೀಲೆಯ ಪರಿಣಾಮವಾಗಿ ಸಾರಿಗೆ ಉದ್ಯಮದಲ್ಲಿ ನುರಿತ ನಿಪುಣರಾಗಿ ಆಗಷ್ಟೇ ಶ್ರೀ ಮಂಜುನಾಥ್ ಮೋಟರ್ಸ್ ಸಾರಿಗೆ ಸಂಸ್ಥೆಯನ್ನು ಸ್ಥಾಪನೆ ಮಾಡಿದ ಇವರ ಭಾವ ಗೋಪಾಲ ಶೆಟ್ಟಿಯವರು ಅಕಾಲಿಕವಾಗಿ ನಿಧನರಾದ ಪರಿಣಾಮವಾಗಿ 3 ಬಸ್‌ಗಳನ್ನು ಹೊಂದಿದ್ದ ಈ ಹೊಸ ಸಂಸ್ಥೆಯನ್ನು ಕಾಲ ಕಾಲದಲ್ಲಿ ಬಹಳ ದೊಡ್ಡ ಸಾರಿಗೆ ಸಂಸ್ಥೆಯಾಗಿ ಆಗಿನ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳಗಿಸಿ 30ಕ್ಕೂ ಹೆಚ್ಚು ಬಸ್ಸುಗಳನ್ನು ಹಳ್ಳಿಯಿಂದ ಪಟ್ಟಣಗಳಿಗೆ ಬಹಳ ಶುಚಿತ್ವದಿಂದ ಸಮಯಕ್ಕೆ ಸರಿಯಾಗಿ ಓಡಿಸಿ ಅತೀ ಎತ್ತರಕ್ಕೆ ಬೆಳೆಸುವುದರಲ್ಲಿ ಯಶಸ್ವಿಯಾದವರು ನಾರಾಯಣ ಶೆಟ್ಟಿಯವರು. ಉಡುಪಿಯಲ್ಲಿ ಸಾರಿಗೆ ಸಂಸ್ಥೆಗೆ ಅಗತ್ಯವಿದ್ದ ಪೆಟ್ರೋಲ್ ಬಂಕ್ ಮತ್ತು ಶೆಟ್ಟಿ ಆಟೋಮೊಬೈಲ್ ಸಂಸ್ಥೆಗಳನ್ನು 1970ರ ದಶಕದಲ್ಲಿ ಸ್ಥಾಪಿಸಿ ಜನ ಮನ್ನಣೆ ಗಳಿಸಿದ ಉದ್ಯಮಿಯಾಗಿ ಹೆಸರು ಗಳಿಸಿದವರು. ಉಡುಪಿ ಲಯನ್ಸ್ ಕ್ಲಬ್‌ನ ಅಧ್ಯಕ್ಷರಾಗಿ ಕೂಡಾ ಸೇವೆ ಸಲ್ಲಿಸಿದ ಇವರ ಅಧ್ಯಕ್ಷತೆಯಲ್ಲಿ ಸುಂದರವಾದ ಲಯನ್ಸ್ ಭವನದ ನಿರ್ಮಾಣವನ್ನು ಉಡುಪಿಯ ಬ್ರಹ್ಮಗಿರಿಯಲ್ಲಿ ನಿರ್ಮಿಸಿದ ಕೀರ್ತಿ ನಾರಾಯಣ ಶೆಟ್ಟಿಯವರಿಗೆ ಸೇರುತ್ತದೆ. ಉಡುಪಿ ಸೀನಿಯರ್ ಸಿಟಿಜನ್ ಫೋರಮ್‌ನ ಅಧ್ಯಕ್ಷರಾಗಿ ನಾರಾಯಣ ಶೆಟ್ಟಿಯವರು 2004ರಿಂದ 2010ರವರೆಗೆ 6 ವರ್ಷಗಳ ದೀರ್ಘ ಕಾಲ ಸೇವೆ ಸಲ್ಲಿಸಿ ಈ ಅವಧಿಯಲ್ಲಿ ಸುಮಾರು 10000ಕ್ಕೂ ಮೇಲ್ಪಟ್ಟು ಮಂದಿಗೆ ಗುರುತು ಚೀಟಿ ವಿತರಿಸುವ ಕಾರ್ಯ, ಹಿರಿಯ ನಾಗರಿಕರಿಗೆ ಆಸ್ಪತ್ರೆಗಳಲ್ಲಿ ಉಚಿತ ವೈದ್ಯಕೀಯ ತಪಾಸಣೆ ಶಿಬಿರಗಳನ್ನು ಏರ್ಪಡಿಸಿ ಜನ ಮೆಚ್ಚುಗೆ ಗಳಿಸಿದ್ದರು. 78 ವರ್ಷಗಳ ಕಾಲ ಉಡುಪಿಯಲ್ಲಿಯೇ ನಿರಂತರವಾಗಿ ತನ್ನ ಜೀವನವನ್ನು ಕರ್ಮ ಭೂಮಿಯಾಗಿ ಕಳೆದು ಯಶಸ್ವೀ ಶ್ರೇಷ್ಠ ಸಾರಿಗೆ ಉದ್ಯಮಿಯಾಗಿ ಬೆಳೆದು ಬಂದು ಬಂಟ ಸಮಾಜಕ್ಕೆ ಮತ್ತು ಉಡುಪಿಯ ಉದ್ಯಮಗಳ ಬೆಳವಣಿಗೆಯಲ್ಲಿ ತೊಡಗಿಸಿಕೊಂಡು ಹಾಗೂ ಸಾಮಾಜಿಕವಾಗಿಯೂ ಸೇವೆ ಸಲ್ಲಿಸಿ ತನ್ನ 93ನೇ ವಯಸ್ಸಿನಲ್ಲಿ ದೇವರ ಪಾದವನ್ನು ಸೇರಿದ ಬಂಟ ನಾಯಕ ನಾರಾಯಣ ಶೆಟ್ಟಿಯವರಿಗೆ ನಮನಗಳು.

**ಸತ್ಯೋದಯ ಹೆಗ್ಡೆ**

ಮಾಜಿ ಕಾರ್ಯಕಾರಿ ಸಮಿತಿ ಸದಸ್ಯರು, ಬಂಟರ ಸಂಘ ಬೆಂಗಳೂರು

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# ಬಂಟರ ಸಂಘ ಬೆಂಗಳೂರು–ಪ್ರಾರ್ಥನಾ ಮಂದಿರ ಸಮಿತಿ ಕುಣಿತ ಭಜನಾ ತರಗತಿ ಉದ್ಘಾಟನಾ ಕಾರ್ಯಕ್ರಮ

ದಿನಾಂಕ 05.04.2026ರಂದು ಪ್ರಾರ್ಥನಾ ಮಂದಿರ ಸಮಿತಿಯ ವತಿಯಿಂದ ಉಚಿತ ಕುಣಿತ ಭಜನಾ ತರಬೇತಿ ತರಗತಿಯನ್ನು ಸಂಘದ ಗೌರವ ಕಾರ್ಯದರ್ಶಿ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿಯವರು ದೀಪ ಪ್ರಜ್ವಲನೆಯ ಮೂಲಕ ಉದ್ಘಾಟನೆಗೊಳಿಸಿದರು.



ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಶೋಭಾ ಶೇಖರವರು ಆಗಮಿಸಿದವರಿಗೆ ಸ್ವಾಗತವನ್ನು ಕೋರಿದರು. ಸಂಘದ ಹಿರಿಯ ಸದಸ್ಯರಾದ ಕೊರ್ಗಿ ಶ್ರೀ ಆನಂದ್ ಶೆಟ್ಟಿಯವರು ಮಕ್ಕಳಿಗೆ ಕುಣಿತ ಭಜನೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡಿದರು. ಕಾರ್ಯಕ್ರಮದಲ್ಲಿ ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಪ್ರಾರ್ಥನಾ ಮಂದಿರ ಸಮಿತಿ ಸದಸ್ಯರು, ಕುಣಿತ ಭಜನಾ ತರಬೇತುದಾರರಾದ ಶ್ರೀ ಶರಣ್ ಶೆಟ್ಟಿಯವರು ಉಪಸ್ಥಿತರಿದ್ದರು. ಪ್ರಾರ್ಥನಾ ಮಂದಿರ ಸಮಿತಿ ಸದಸ್ಯರಾದ ಶ್ರೀ ಚಂದ್ರಶೇಖರ್ ಶೆಟ್ಟಿಯವರು ಕಾರ್ಯಕ್ರಮದ ನಿರೂಪಣೆಯನ್ನು ಅಚ್ಚುಕಟ್ಟಾಗಿ ಮಾಡಿದರು.

**ಪ್ರಸಾದ್ ಕುಮಾರ್ ಶೆಟ್ಟಿ**
ಸಂಚಾಲಕರು, ಪ್ರಾರ್ಥನಾ ಮಂದಿರ ಸಮಿತಿ





ಸಂಚಾಲಕರಾದ ಶ್ರೀ ಪ್ರಸಾದ್ ಶೆಟ್ಟಿಯವರ ಧನ್ಯವಾದ ಸಮರ್ಪಣೆಯ ನಂತರ ಕಾರ್ಯಕ್ರಮ ಮುಕ್ತಾಯಗೊಂಡಿತು.

ನಂತರ ಸಂಘದ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದಲ್ಲಿ ತರಬೇತುದಾರರು ಮಕ್ಕಳಿಂದ ಭಜನೆ ಹಾಡಿಸಿ ಕುಣಿತ ಭಜನೆ ತರಗತಿಗೆ ಚಾಲನೆ ನೀಡಿದರು. ಕಾರ್ಯಕ್ರಮವನ್ನು ಚಂದಗಾಣಿಸಿದ ಮಕ್ಕಳಿಗೂ ಪೋಷಕರಿಗೂ ಧನ್ಯವಾದಗಳು.

ಭಜನೆ ಮತ್ತು ಕುಣಿತ ಭಜನೆ ಎರಡೂ ತರಗತಿಗಳನ್ನು ನಮ್ಮ ಸಂಘದ ಮಕ್ಕಳಿಗೆ ಉಚಿತವಾಗಿ ಸಂಘದಲ್ಲಿ ಅವಕಾಶ ಕಲ್ಪಿಸಿಕೊಟ್ಟ ತೃಪ್ತಿ ನಮಗೆ. ಕುಣಿತ ಭಜನೆ ತರಗತಿಗೆ ಸೇರಿಕೊಳ್ಳಲು ಆಸಕ್ತಿ ಉಳ್ಳವರು ಶೋಭಾ ಶೇಖ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಪರ್ಸನ್ ಅವರನ್ನು ಸಂಪರ್ಕಿಸಿ:– 9901885998

**ಶೋಭಾ ಶೇಖ**
ಚೇರ್‌ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ 2024–26

## ಸಹೃದಯ ಸಮಾಜ ಬಾಂಧವರಲ್ಲಿ ವಿನಂತಿ

ಬಂಟರ ಸಂಘ ಬೆಂಗಳೂರು ಮೊದಲಿನಿಂದಲೂ ಸಾಮಾಜಿಕ ಕಳಕಳಿಯ ಸಂಸ್ಥೆ. ವಿವಿಧ ಸಮಿತಿಗಳ ಮೂಲಕ ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಮಾಜದ ವಿವಿಧ ಸ್ತರಗಳಲ್ಲಿನ ಜನಗಳಿಗೆ ಅಗತ್ಯಕ್ಕೆ ತಕ್ಕಂತೆ ಸಹಕಾರ ನೀಡುತ್ತಾ ಬಂದಿದೆ.

"ಇಂದಿನ ವಿದ್ಯಾರ್ಥಿಗಳೇ ಮುಂದಿನ ಸಮುದಾಯದ ಭವಿಷ್ಯದ ರೂವಾರಿ" ಎಂಬ ನಿತ್ಯ ಸತ್ಯವನ್ನು ಮನಗಂಡು ನಮ್ಮ ಸಂಸ್ಥೆಯು ಕಳೆದ ಎರಡು ದಶಕಗಳಿಂದ ಸಮುದಾಯದ ಅಗತ್ಯವಿರುವ ವಿದ್ಯಾರ್ಥಿಗಳಿಗೆ 'ಬಡ್ಡಿ ರಹಿತ ಸಾಲ' ರೂಪದಲ್ಲಿ ಕೋಟ್ಯಾಂತರ ರೂಪಾಯಿಗಳ ನೆರವನ್ನು ನೀಡಿದೆ. ನಮ್ಮ ಸಂಘದಿಂದ ಸಹಾಯ ಪಡೆದ ಅನೇಕ ವಿದ್ಯಾರ್ಥಿಗಳು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಯಶಸ್ಸುಗಳಿಸಿ ಔದ್ಯೋಗಿಕವಾಗಿ ಮುನ್ನಡೆಯುತ್ತಿರುವುದು ಸಂಘಕ್ಕೆ ಸಾರ್ಥಕತೆಯನ್ನು ತಂದಿದೆ.

ಸಂಘವು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಆರ್ಥಿಕ ಸಹಾಯದ ಸೇವೆಯನ್ನು ಮುಂದುವರಿಸಬೇಕಾದಲ್ಲಿ ಈಗಾಗಲೇ ತಾವು ಸಂಘದಿಂದ ಪಡೆದ 'ಬಡ್ಡಿ ರಹಿತ ಸಾಲ' ರೂಪದ ಸಹಾಯ ನಿಧಿಯನ್ನು ಸಂಘಕ್ಕೆ ಹಿಂದಿರುಗಿಸುವುದು ಅತ್ಯಗತ್ಯ. ಸಂಘದ ಸಹಾಯಧನ ಹಾಗೂ ತಮ್ಮ ಶ್ರಮದಿಂದ ಔದ್ಯೋಗಿಕವಾಗಿ ಹಾಗೂ ಆರ್ಥಿಕವಾಗಿ ಸಬಲರಾಗಿರುವ ತಾವು, ಪಡೆದ ಹಣವನ್ನು ಸಂಘಕ್ಕೆ ಹಿಂದಿರುಗಿಸುವ ಮೂಲಕ ಇನ್ನಷ್ಟು ಸಮುದಾಯದ ವಿದ್ಯಾರ್ಥಿಗಳಿಗೆ ಸೌಲಭ್ಯ ಸಿಗುವಂತೆ ಮಾಡಬಹುದು.

ಸಂಘದ ಸಮಾಜ ಮುಖಿ ಚಿಂತನೆ ಹಾಗೂ ಕಾರ್ಯಚಟುವಟಿಕೆಗಳಿಗೆ ತಾವೆಲ್ಲ ಕೈಜೋಡಿಸುವಿರೆಂಬ ಆಶಯ ನಮ್ಮದು. ನಿಮ್ಮ ಸಂಬಂಧಿಕರಲ್ಲಿ, ಸ್ನೇಹಿತರಲ್ಲಿ ಹಾಗೂ ಪರಿಚಿತರಲ್ಲಿ ಈ ಬಗ್ಗೆ ಅರಿವು ಮೂಡಿಸುವಂತೆ ವಿನಮ್ರವಾಗಿ ವಿನಂತಿಸುತ್ತಿದ್ದೇವೆ.

ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನವರನ್ನು ಸಂಪರ್ಕಿಸಬಹುದಾಗಿದೆ;

**ಉಮೇಶ್ ಕುಮಾರ್ ಶೆಟ್ಟಿ – 9741220559, ಸುಧಾಕರ ಶೆಟ್ಟಿ ಹಟ್ಟಿಯಂಗಡಿ – 9449089993**

**ಸಂಘದ ಕಛೇರಿ – 7022119739, 080 – 23399323 / 23399636**

ಸೂಚನೆ: ಮರು ಪಾವತಿ ಹಣವನ್ನು ಒಟ್ಟಾರೆ/ ಕಂತು ರೂಪದಲ್ಲಿ ಸಂಘದ ಕಛೇರಿಗೆ ಚೆಕ್/ ಡಿಡಿ ಮೂಲಕ ಅಥವಾ ಸಂಘದ "BUNTS SANHGA VIDYARTHI VETANA DATTU NIDHI" - ಎಸ್.ಬಿ. ಅಕೌಂಟ್ ನಂ. 89450100019578, ಬ್ಯಾಂಕ್ ಆಫ್ ಬರೋಡ, ಐ.ಎಫ್.ಎಸ್.ಸಿ: BARB0VJVIJB ಹೊಸಹಳ್ಳಿ ಶಾಖೆ, ವಿಜಯನಗರ, ಬೆಂಗಳೂರು ಇಲ್ಲಿಗೆ ಸಂದಾಯವಾಗುವಂತೆ ಪಾವತಿ ಮಾಡಬಹುದು.

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಸಿಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಸುಧಾಕರ ಶೆಟ್ಟಿ ಹಟ್ಟಿಯಂಗಡಿ**
ಸಂಚಾಲಕರು,
ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ

**ಉಮೇಶ್ ಕುಮಾರ್ ಶೆಟ್ಟಿ**
ಚೇರ್‌ಪರ್ಸನ್,
ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ ಸದಸ್ಯರು**

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

ನಂ. 324, ಬಂಟರ ಸಂಘದ ಸಂಕೀರ್ಣ, ಕಾರ್ಡ್ ರಸ್ತೆ, ವಿಜಯನಗರ, ಬೆಂಗಳೂರು – 560040.
ದೂರವಾಣಿ: 080–23399323 / 23399636 / ಮೊ.: 70221 19739

